ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಕೆ.ಎಸ್. ಮುದಗಲ್

ಜವರಪ್ಪ ಅಲಿಯಾಸ್ ಜವರಯ್ಯ -ವಿರುದ್ಧ-ರಾಮಯ್ಯ ಮತ್ತು ಇನ್ನೊಬ್ಬರು

ಆರ್.ಎಸ್.ಎ.ಸಂಖ್ಯೆ: 55/2013 (ಡಿಇಸಿ) ದಿನಾಂಕ 25 ನೇ ಜೂನ್, 2020.

ತೀರ್ಪು

ನ್ಯಾಯಮೂರ್ತಿ ಶ್ರೀಮತಿ ಕೆ.ಎಸ್. ಮುದಗಲ್:

I ನೇ ಹೆಚ್ಚುವರಿ ಪ್ರಥಮ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಮೈಸೂರು ಇವರು, ಒ.ಎಸ್.ಸಂಖ್ಯೆ: 1129/2006 ರಲ್ಲಿ ಹೊರಡಿಸಿದದಿನಾಂಕ: 15.04.2011 ರ ತೀರ್ಪು ಮತ್ತು ಡಿಕ್ರಿಯಿಂದ ಉದ್ಭವಿಸಿದ ಆರ್.ಎ.ಸಂಖ್ಯೆ: 598/2011 ರಲ್ಲಿ, ಪೀಠಾಸೀನ ಅಧಿಕಾರಿ, ತ್ವರಿತ ಗತಿ ನ್ಯಾಯಾಲಯ-IV, ಮೈಸೂರು ಇವರುದಿನಾಂಕ: 24.09.2012 ರಂದು ಹೊರಡಿಸಿದ ತೀರ್ಪು ಮತ್ತು ಡಿಗ್ರಿಯಿಂದ ಈ ನಿಯತ ಎರಡನೇ ಮೇಲ್ಮನವಿಯು ಉದ್ಭವಿಸಿದೆ.

2. ಪ್ರಥಮ ಮೇಲ್ಮನವಿ ನ್ಯಾಯಾಲಯವು, ಪ್ರಶ್ನೆತ ತೀರ್ಪು ಮತ್ತು ಡಿಗ್ರಿಯ ಮೂಲಕ ವಾದಿಯ ಮೇಲ್ಮನವಿಯನ್ನು ವಜಾಗೊಳಿಸಿದೆ ಮತ್ತು ಘೋಷಣೆ, ಇತ್ಯಾದಿ ಸಂಬಂಧದಲ್ಲಿ ವಾದಿಯ ಮೇಲ್ಮನವಿದಾರನ ದಾವೆಯನ್ನು ವಜಾಗೊಳಿಸಿ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ಡಿಕ್ಕಿಯನ್ನು ಸ್ಥಿರೀಕರಿಸಿದೆ.

3. ಅನುಮತಿಯ ಮೇರೆಗೆ ಮೇಲ್ಮನವಿಯ ಸುನಾವಣೆಗೆ ಅನುಕೂಲ ಮಾಡಿಕೊಡಲು, ಮೇಲ್ಮನವಿದಾರನ ಪರ ಮಾನ್ಯ ನ್ಯಾಯವಾದಿ ಮತ್ತು ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ನ್ಯಾಯವಾದಿಯು (ಫೀಡರ್) 9, ದಾವೆಯಲ್ಲಿನ ಚ ನಿಶಾನೆ-ಪಿ .1 ರಿಂದ ಪಿ.ವರೆಗಿನ ಪ್ರತಿಗಳನ್ನು ಮತ್ತು ಕರ್ನಾಟಕ ಸರ್ಕಾರದ 0 ಕಂದಾಯ ಇಲಾಖೆಯು ಹೊರಡಿಸಿದದಿನಾಂಕ: 12.03.2008 ರ ಸುತ್ತೋಲೆಸಂಖ್ಯೆ: ಆರ್ಡಿ 46 ಎಎಸ್ಡಿ 2005 ರ ಪ್ರತಿಯನ್ನು ಸಲ್ಲಿಸಿದ್ದಾರೆ.ಅವುಗಳನ್ನು ದಾಖಲೆಗೆ ಸೇರಿಸಲಾಗಿದೆ.ಅಧಿವಿಚಾರಣಾ ನ್ಯಾಯಾಲಯದ ಮುಂದೆ ಮೇಲ್ಮನವಿದಾರನು ವಾದಿಯಾಗಿದ್ದು, 1 ನೇ ಮತ್ತು 2 ನೇ ಎದುರುದಾರರು 1 ನೇ ಮತ್ತು 2 ನೇ ಪ್ರತಿವಾದಿಗಳಾಗಿದ್ದರು.

4. ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳು ಈ ಮುಂದಿನಂತಿವೆ:

1) ರಾಮಯ್ಯ ಮತ್ತು ಸಣ್ಣಮ್ಮ ಎಂಬುವವರು ದಂಪತಿಗಳಾಗಿದ್ದರು.ರಾಮಯ್ಯದಿನಾಂಕ: 06.07.1984 ರಂದು ಮತ್ತು ಸಣ್ಣಮ್ಮದಿನಾಂಕ: 09.04.1998 ರಂದು ಮೃತರಾದರು.ಎರಡನೇ ಎದುರುದಾರ/ತಹಸೀಲ್ದಾರ್, ಮೈಸೂರು ಇವರ ಮುಂದೆ, ಮೇಲ್ಮನವಿದಾರನು ತಾನು ರಾಮಯ್ಯ ಮತ್ತು ಸಣ್ಣಮ್ಮ ದಂಪತಿಗಳ ಏಕೈಕ ಮಗ/ ಜೀವಿತ ಉತ್ತರಾಧಿಕಾರಿಯೆಂದು ಮತ್ತು ತದನುಸಾರವಾಗಿ ಉತ್ತರಾಧಿಕಾರಿತ್ವದ ಪ್ರಮಾಣಪತ್ರವನ್ನು ನೀಡಬೇಕೆಂದು ಕೇಮು ಮಾಡಿ ಅರ್ಜಿ ಸಲ್ಲಿಸಿದ್ದನು.ಅಂಥ ಅರ್ಜಿಯ ಆಧಾರದ ಮೇಲೆ, ಎರಡನೇ ಎದುರುದಾರರು ವಿಚಾರಣೆ ನಡೆಸಿ, ಮೇಲ್ಮನವಿದಾರನು ಮೃತ ರಾಮಯ್ಯ ಮತ್ತು ಸಣ್ಣಮ್ಮ ದಂಪತಿಯ ಏಕೈಕ

ಮಗ/ಜೀವಿತ ಉತ್ತರಾಧಿಕಾರಿ ಎಂಬ ಮಟ್ಟಿಗೆ ನಿಶಾನೆ-ಪಿ 3,ದಿನಾಂಕ: 11.03.2005 ರಂತೆ ಉತ್ತರಾಧಿಕಾರಿತ್ವ ಪ್ರಮಾಣಪತ್ರವನ್ನು ನೀಡಿದ್ದಾರೆ.

ii) ತರುವಾಯ, ಮೊದಲನೇ ಎದುರುದಾರನು, ತಾನು ಸಹ ರಾಮಯ್ಯ ಮತ್ತು ಸಣ್ಣಮ್ಮ ದಂಪತಿಯ ಮಗನೆಂದು ಮತ್ತು ಮೇಲ್ಮನವಿದಾರನು ಸದರಿ ಸಂಗತಿಯನ್ನು ಮುಚ್ಚಿಟ್ಟು ಮೋಸದಿಂದ ನಿಶಾನೆ-ಪಿತಿಯಂತೆ ಪ್ರಮಾಣಪತ್ರವನ್ನು ಪಡೆದಿದ್ದಾನೆಂದು ಕ್ಲೇಮು ಮಾಡಿ ಎರಡನೇ ಎದುರುದಾರರಿಗೆ ಅರ್ಜಿ ಸಲ್ಲಿಸಿದನು.ಆದುದರಿಂದ, ನಿಶಾನೆ-ಪಿ .3 ರಲ್ಲಿನ ಪ್ರಮಾಣಪತ್ರವನ್ನು ರದ್ದುಗೊಳಿಸಿ, ರಾಮಯ್ಯ ಮತ್ತು ಸಣ್ಣಮ್ಮ ದಂಪತಿಗಳ ಗಂಡು ಮಕ್ಕಳೆಂದು ತನ್ನನ್ನು ಮತ್ತು ಮೇಲ್ಮನವಿದಾರನನ್ನು ತೋರಿಸಿ ಹೊಸ ಉತ್ತರಾಧಿಕಾರತ್ವ ಪ್ರಮಾಣಪತ್ರವನ್ನು ನೀಡಬೇಕೆಂದು ಕೋರಿದ್ದಾನೆ.

iii) ಅಂಥ ಅರ್ಜಿಯ ಆಧಾರದ ಮೇಲೆ, ಎರಡನೇ ಎದುರುದಾರರು ವಿಚಾರಣೆ ನಡೆಸಿ, ಇಬ್ಬರ ವಾದಗಳನ್ನು ಆಲಿಸಿದ ನಂತರ, ಎರಡನೇ ಎದುರುದಾರರು, ಮೊದಲನೇ ಎದುರುದಾರನ ವಾದವನ್ನು ಒಪ್ಪಿ,ದಿನಾಂಕ: 11.03.2005 ರ ಉತ್ತರಾಧಿಕಾರತ್ವ ಪ್ರಮಾಣಪತ್ರ ನಿಶಾನೆ-ಪಿ.ಯನ್ನು ರದ್ದುಗೊಳಿಸಿ,ದಿನಾಂಕ: 21.04.2006 ರ ನಿಶಾನೆ-ಪಿ -1 ರಲ್ಲಿಯಂತೆ ಹೊಸ ಆದೇಶವನ್ನು ಹೊರಡಿಸಿದ್ದಾರೆ ಹಾಗೂ ಮೇಲ್ಮನವಿದಾರ ಮತ್ತು ಮೊದಲನೇ ಎದುರುದಾರರಿಬ್ಬರ ಹೆಸರಿನಲ್ಲಿದಿನಾಂಕ: 21.04.2006 ರಲ್ಲಿರುವಂತೆ ಹೊಸ ಉತ್ತರಾಧಿಕಾರ ಪ್ರಮಾಣಪತ್ರವನ್ನು ನೀಡಿದ್ದಾರೆ.

5. ಮೇಲ್ಮನವಿದಾರನು,ದಿನಾಂಕ: 21.04.2006 ರಂದು ಎರಡನೇ ಎದುರುದಾರರು ಹೊರಡಿಸಿದ ಮಾರ್ಪಡಿತ ಆದೇಶವು ಕಾನೂನುಬಾಹಿರವಾದುದಾಗಿದೆ ಮತ್ತು ತನ್ನ ಪರವಾಗಿ ನೀಡಿದ ನಿಶಾನೆ-ಪಿ .3/ದಿನಾಂಕ:11.03.2005 ರ ಪ್ರಮಾಣಪತ್ರವು ಕಾನೂನಿಗನುಸಾರವಾಗಿದೆ ಎಂಬ ಘೋಷಣೆಯನ್ನು ಕೋರಿ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಒ.ಎಸ್.ಸಂಖ್ಯೆ: 1129/2006 ನ್ನು ಸಲ್ಲಿಸಿದ್ದಾನೆ.ಮೊದಲನೇ ಎದುರುದಾರನು ತನ್ನ ಪಾಲಕರಾದ ಮೃತ ರಾಮಯ್ಯ ಮತ್ತು ಸಣ್ಣಮ್ಮ ಇವರ ಮಗನಲ್ಲ ಮತ್ತು ಎರಡನೇ ಎದುರುದಾರರು ಮೊಕದ್ದಮೆಯಲ್ಲಿ ಉದ್ಭವಿಸಿದ ಸಾಕ್ಷ್ಯದ ಗುಣಾರ್ಹತೆಗಳನ್ನು ವಿವೇಚಿಸುವಲ್ಲಿ ವಿಫಲರಾಗಿದ್ದಾರೆ ಎಂದು ವಾದಿಸಿದ್ದಾನೆ.

6. ಎದುರುದಾರರು ತಮ್ಮ ಲಿಖಿತ ಹೇಳಿಕೆಗಳನ್ನು ಸಲ್ಲಿಸಿ ದಾವೆಯಲ್ಲಿ ವಾದ ಮಂಡಿಸಿದ್ದಾರೆ.ಅವರು, ನಿಶಾನೆ-ಪಿ .1 ಮತ್ತು ಪಿ .2 ರ ಮೇರೆಗೆ ಎರಡನೇ ಪ್ರತಿವಾದಿಯು ಹೊರಡಿಸಿದ ಆದೇಶದ ವಿರುದ್ಧ ಮೇಲ್ಮನವಿದಾರನು ಯಾವುದೇ ಅಸಂತೃಪ್ತಿಯನ್ನು ಹೊಂದಿದ್ದರೆ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ (ಸಂಕ್ಷಿಪ್ತವಾಗಿ ' ಅಧಿನಿಯಮ) 49 ನೇ ಪ್ರಕರಣದ ಅಡಿಯಲ್ಲಿ ಮೇಲ್ಮನವಿ ರೂಪದಲ್ಲಿ ತನ್ನ ಪರಿಹಾರವನ್ನು ಹೊಂದಿದ್ದನಾದ್ದರಿಂದ, ಅಧಿನಿಯಮದ 49 ನೇ ಮತ್ತು 63 ನೇ ಪ್ರಕರಣಗಳು ದಾವೆಗೆ ಪ್ರತಿಕೂಲಕರವಾಗಿದ್ದವು ಮತ್ತು ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಅಂಥ ವಿಷಯಗಳಲ್ಲಿ ಪ್ರತಿಬಂಧಿಸಲಾಗಿದೆ ಎಂದು ವಾದಿಸಿದ್ದಾರೆ.

7. ಇದಲ್ಲದೆ, 1 ನೇ ಎದುರುದಾರನು, ತಾನು ಮತ್ತು ಮೇಲ್ಮನವಿದಾರ ಇಬ್ಬರು ರಾಮಯ್ಯ ಅಲಿಯಾಸ್ ಚಿಕ್ಕರಾಮಯ್ಯ ಮತ್ತು ಸಣ್ಣಮ್ಮರವರ ಗಂಡು ಮಕ್ಕಳಾಗಿದ್ದು, ಆ ಸಂಗತಿಯನ್ನು ಮುಚ್ಚಿಟ್ಟು ಮೇಲ್ಮನವಿದಾರನುದಿನಾಂಕ: 11.03.2005 ರಂದು ಉತ್ತರಾಧಿಕಾರತ್ವ ಪ್ರಮಾಣಪತ್ರವನ್ನು ಪಡೆದಿದ್ದಾನೆ, ನೈಜ

ಸಂಗತಿಗಳನ್ನು ಬಹಿರಂಗಪಡಿಸಿದ ನಂತರ, ಎರಡನೇ ಎದುರುದಾರರು ಪ್ರಶ್ನಿತ ಆದೇಶವನ್ನು ಸರಿಯಾಗಿಯೇ ಹೊರಡಿಸಿದ್ದಾರೆ.ಇದಲ್ಲದೆ, ಎರಡನೇ ಎದುರುದಾರರು, ಸಿವಿಲ್ ಪ್ರಕ್ರಿಯಾ ಸಂಹಿತೆಯ 80 ನೇ ಪ್ರಕರಣವನ್ನು ಅನುಪಾಲಿಸದಿರಲು, ಎಂದರೆ ದಾವೆಯನ್ನು ಹೂಡುವ ಮೊದಲು ಸರ್ಕಾರಕ್ಕೆ ಶಾಸನಾತ್ಮಕ ನೋಟೀಸನ್ನು ಜಾರಿ ಮಾಡುವುದಕ್ಕೆ ದಾವೆಯು ದೋಷಯುಕ್ತವಾಗಿತ್ತು ಎಂದು ವಾದಿಸಿದ್ದಾನೆ.

8. ಅಂಥ ವಾದಗಳ ಆಧಾರದ ಮೇಲೆ, ಅಧಿವಿಚಾರಣಾ ನ್ಯಾಯಾಲಯವು ಈ ಮುಂದಿನ ವಿವಾದಾಂಶಗಳನ್ನು ರೂಪಿಸಿದೆ:

ವಿವಾದಾಂಶಗಳು

1. ವಾದಿಯು ವಾದಪತ್ರದಲ್ಲಿ ಕ್ಲೇಮು ಮಾಡಿದಂತೆ ಘೋಷಣೆಯ ಪರಿಹಾರಕ್ಕೆ ತಾನು ಅರ್ಹನಿರುವುದಾಗಿ ಸಾಬೀತುಪಡಿಸಿದ್ದಾನೆಯೇ?

2. ವಾದಿಯು ಇತರ ಯಾವ ಪರಿಹಾರಕ್ಕೆ ಅರ್ಹನಿದ್ದಾನೆ?

3. ಆದೇಶ ಅಥವಾ ಡಿಕ್ರಿ ಏನು?

9. ಪಕ್ಷಕಾರರು ಸಾಕ್ಷ್ಯವನ್ನು ಮಂಡಿಸಿದ್ದಾರೆ.ಮೇಲ್ಮನವಿದಾರ ಪಿ.ಡಬ್ಲ್ಯು.1 ಆಗಿ ಸ್ವತಃ ವಿಚಾರಣೆಗೊಳಗಾಗಿದ್ದಾನೆ ಮತ್ತು ಪಿ.ಡಬ್ಲ್ಯು .2 ರಿಂದ 4 ರವರೆಗಿನ ಆತನ ಸಾಕ್ಷಿದಾರರನ್ನು ವಿಚಾರಣೆ ಮಾಡಲಾಗಿದ್ದು, ನಿಶಾನೆ-ಪಿ 1 ರಿಂದ ಪಿ .16 ರವರೆಗಿನ ದಾಖಲೆಗಳನ್ನು ಗುರುತಿಸಲಾಗಿದೆ.1 ನೇ ಎದುರುದಾರನ ಪರವಾಗಿ, ಡಿ.ಡಬ್ಲ್ಯು .1 ರಿಂದ 3 ಸಾಕ್ಷಿದಾರರನ್ನು ವಿಚಾರಣೆ ಮಾಡಲಾಗಿದ್ದು, ನಿಶಾನೆ-ಡಿ .1 ರಿಂದ ಡಿ .6 ವರೆಗಿನ ದಾಖಲೆಗಳನ್ನು ಗುರುತು ಮಾಡಲಾಯಿತು.

10. ಎರಡೂ ಕಡೆಯವರ ವಾದಗಳನ್ನು ಆಲಿಸಿದ ನಂತರ, ವಿಚಾರಣಾ ನ್ಯಾಯಾಲಯವು ಈ ಮುಂದಿನ ಕಾರಣಗಳಿಗಾಗಿ ದಾವೆಯನ್ನು ವಜಾಗೊಳಿಸಿತು:

1) ವಾದಿಯು, ನಿಶಾನೆ-ಪಿ .1 ರ ಪ್ರಕಾರ ಎರಡನೇ ಎದುರುದಾರರು/ತಹಸೀಲ್ದಾರರು ಹೊರಡಿಸಿದದಿನಾಂಕ: 21.04.2006 ರ ಆದೇಶವು ಕಾನೂನುಬಾಹಿರವಾದುದೆಂಬ ಘೋಷಣೆಯನ್ನು ಕೋರುತ್ತಿದ್ದಾನೆ.ಅಂಥ ಆದೇಶದ ವಿರುದ್ಧ, ಅಧಿನಿಯಮದ 49 ನೇ ಪ್ರಕರಣದ ಅಡಿಯಲ್ಲಿ ಮೇಲ್ಮನವಿಗೆ ಉಪಬಂಧ ಕಲ್ಪಿಸಲಾಗಿದೆ.

ii) ಅಂಥ ಮೇಲ್ಮನವಿಯನ್ನು ಉಪಬಂಧಿಸಿದಲ್ಲೆಲ್ಲಾ, ಅಧಿನಿಯಮದ 63 ನೇ ಪ್ರಕರಣವು, ಮೇಲ್ಮನವಿ ಪರಿಹಾರ ಲಭ್ಯವಿದ್ದ ಹೊರತು ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಪ್ರತಿಬಂಧಿಸುತ್ತದೆ.

iii) ಹಾಗೆ ನಿರ್ಣಯಿಸುವಲ್ಲಿ, ಅಧಿವಿಚಾರಣಾ ನ್ಯಾಯಾಲಯವು ಈ ನ್ಯಾಯಾಲಯದ ಈ ಮುಂದಿನ ತೀರ್ಪುಗಳನ್ನು ಅವಲಂಬಿಸಿದೆ:

1) ಕರ್ನಾಟಕ ರಾಜ್ಯ ವಿರುದ್ಧ-ಶ್ರೀಮತಿ ಶಕುಂತಲಮ್ಮ (2008 ಕೆಎಲ್ಜೆ 79)

ii) ರಾಮಾ ಜೋಯಿಸ್ -ವಿರುದ್ಧ-ಮುಖ್ಯ ಕಾರ್ಯದರ್ಶಿ (ಎಎಲ್ಆರ್ 1996 ಕೆಎಆರ್ 715)

iii) ಬಸವಣ್ಣಿ ಶಂಕರ್ ಅಮ್ಮಣಗಿ -ವಿರುದ್ಧ-ಶ್ರೀಮತಿ ಕೇಶವ್ವ ಮತ್ತು ಇತರರು (2002 ( 2) ಕೆಎಲ್ಜೆ 317)

11. ವಾದಿಯು ಸದರಿ ತೀರ್ಪ ಮತ್ತು ಡಿಕ್ಕಿಯನ್ನು, ನಿಯತ ಮೇಲ್ಮನವಿಸಂಖ್ಯೆ: 598/2011 ರಲ್ಲಿ ತ್ವರಿತ ಗತಿ ನ್ಯಾಯಾಲಯ-IV, ಮೈಸೂರು ಇವರ ಮುಂದೆ ಪ್ರಶ್ನಿಸಿದ್ದಾನೆ.ಪ್ರಥಮ ಮೇಲ್ಮನವಿ ನ್ಯಾಯಾಲಯವು, ಪ್ರಶ್ನಿತ ತೀರ್ಪು ಮತ್ತು ಡಿಗ್ರಿಯ ಮೂಲಕ ಎರಡೂ ಕಡೆಯವರ ವಾದಗಳನ್ನು ಆಲಿಸಿದ ನಂತರ, ಅಧಿವಿಚಾರಣಾ ನ್ಯಾಯಾಲಯವು ನೀಡಿದ ಕಾರಣ ಮತ್ತು ನಿರ್ಣಯಗಳೊಂದಿಗೆ ಸಹಮತ ಹೊಂದಿ ಮೇಲ್ಮನವಿಯನ್ನು ವಜಾಗೊಳಿಸಿತು.

12. ಸದರಿ ತೀರ್ಪುಗಳು ಮತ್ತು ಡಿಗ್ರಿಯಿಂದ ಬಾಧಿತನಾಗಿ, ವಾದಿಯು ಮೇಲಿನ ಮೇಲ್ಮನವಿಯನ್ನು ಹೂಡಿದ್ದಾನೆ.ಸಿವಿಲ್ ಪ್ರಕ್ರಿಯಾ ಸಂಹಿತೆಯ 100 ನೇ ಪ್ರಕರಣದ ಅಡಿಯಲ್ಲಿ ಇದು ಎರಡನೇ ಮೇಲ್ಮನವಿಯಾಗಿರುವುದರಿಂದ, ಅದು ಕಾನೂನಿನ ಪ್ರಮುಖ ಪ್ರಶ್ನೆಯನ್ನು ಒಳಗೊಂಡಿದ್ದರೆ ಮಾತ್ರವೇ ಅದನ್ನು ಸುನಾವಣೆಗೆ ಅಂಗೀಕರಿಸಬಹುದಾಗಿದೆ.

13. ಸಂತೋಷ್ ಹಜಾರಿ -ವಿರುದ್ಧ-ಪುರುಷೋತ್ತಮ್ ತಿವಾರಿ ಮತ್ತು ಗುರ್ನಾಮ್ ಸಿಂಗ್ -ವಿರುದ್ಧ ಲೆಕ್ಕಾ ಸಿಂಗ್ 2-ಮೊಕದ್ದಮೆಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಮುಂಚಿನ ತನ್ನ ಹಲವಾರು ತೀರ್ಪುಗಳನ್ನವಲಂಬಿಸಿ, ಚ ಕಾನೂನಿನ ಪ್ರಮುಖ ಪ್ರಶ್ನೆ ಎಂದರೆ ಏನು ಎಂಬುದನ್ನು ನಿರೂಪಿಸಿದೆ.

14. ಸಂತೋಷ್ ಹಜಾರಿ ಮೊಕದ್ದಮೆಯಲ್ಲಿ, ಈ ಕೆಳಗಿನ ೦ ತೆ ನಿರ್ಣಯಿಸಲಾಗಿತ್ತು

"14. ಯಾವುದೇ ಎರಡು ಅಭಿಪ್ರಾಯಗಳನ್ನು ಒಪ್ಪದಿರುವ ಕಾನೂನಿನ ಅಂಶವು ಕಾನೂನಿನ ಪ್ರತಿಪಾದನೆಯಾಗಬಹುದಾದರೂ, ಕಾನೂನಿನ ಪ್ರಮುಖ ಪ್ರಶ್ನೆಯಾಗುವುದಿಲ್ಲ.ಕಾನೂನಿನ ಪ್ರಶ್ನೆಯು " ಪ್ರಮುಖ " ವಾಗಲು, ಚರ್ಚಾಸ್ಪದವಾಗಿರಬೇಕೇ ಹೊರತು, ದೇಶದ ಕಾನೂನಿನ ಮೂಲಕ ಹಿಂದೆ ಇತ್ಯರ್ಥಪಡಿಸಿರುವುದು ಅಥವಾ ಬಂಧನಕಾರಿ ಪೂರ್ವನಿದರ್ಶನ ಆಗಿರಬಾರದು ಮತ್ತು ಅದರ ಮುಂದೆ ಪಕ್ಷಕಾರರ ಹಕ್ಕುಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ಯಾವ ರೀತಿಯಿಂದಲಾದರೂ ಉತ್ತರಿಸುವುದಿದ್ದರೆ, ಮೊಕದ್ದಮೆಯ ನಿರ್ಣಯಕ್ಕೆ ಸಂಬಂಧಿಸಿದ ಸಾಕ್ಷ್ಯವನ್ನು ಹೊಂದಿರಬೇಕು. "ಮೊಕದ್ದಮೆಯಲ್ಲಿ ಒಳಗೊಂಡಿರುವ " ಕಾನೂನಿನ ಪ್ರಶ್ನೆಯಾಗಬೇಕಿದ್ದರೆ, ಮೊದಲು ವಾದಗಳಲ್ಲಿ ಮಂಡಿಸಿದ ಅದಕ್ಕೆ ಸಂಬಂಧಿಸಿದ ತತ್ವವಿರಬೇಕು ಮತ್ತು ಸಂಗತಿಗಳ ಬಗ್ಗೆ ನ್ಯಾಯಾಲಯವು ಇತ್ಯರ್ಥಕ್ಕೆ ಬಂದ ಸಂಗತಿಯ ಸಮರ್ಥಿಸಬಹುದಾದ ನಿರ್ಣಯಗಳಿಂದ ಪ್ರಶ್ನೆಯು ಉದ್ಭವಿಸಿರಬೇಕು ಹಾಗೂ ಕಾನೂನಿನ ಪ್ರಶ್ನೆಯು, ನ್ಯಾಯ ಮತ್ತು ಮೊಕದ್ದಮೆಯ ಸೂಕ್ತ ನಿರ್ಣಯಕ್ಕಾಗಿದೆ ಎಂದು ನಿರ್ಣಯಿಸುವುದು ಅಗತ್ಯವಾಗಿರಬೇಕು.ಮೊದಲ ಬಾರಿಗೆ ಉಚ್ಚ ನ್ಯಾಯಾಲಯದ ಮುಂ ಸಂಪೂರ್ಣವಾಗಿ ಹೊಸ ಅಂಶವನ್ನು ಎತ್ತಲಾಗಿದ್ದು, ವಿಷಯದ ಮೂಲಕ್ಕೆ ಹೋಗದ ಹೊರತು ಅದು ಮೊಕದ್ದಮೆಯಲ್ಲಿ ಅಡಗಿರುವ ಪ್ರಶ್ನೆಯಾಗುವುದಿಲ್ಲ.ಆದುದರಿಂದ, ಕಾನೂನಿನ ಪ್ರಶ್ನೆಯು ಪ್ರಮುಖವಾದುದೇ ಮತ್ತು ಮೊಕದ್ದಮೆಯಲ್ಲಿ ಅಡಗಿರುವ ಪ್ರಶ್ನೆಯೇ ಅಥವಾ ಅಲ್ಲವೇ ಎಂಬುದು ಪ್ರತಿಯೊಂದು ಮೊಕದ್ದಮೆಯ ಸಂಗತಿಗಳನ್ನು ಮತ್ತು ಸಂದರ್ಭವನ್ನು ಅವಲಂಬಿಸಿರುತ್ತದೆ; ಎಲ್ಲಾ ಹಂತಗಳಲ್ಲಿ ನಿಷ್ಪಕ್ಷಪಾತವಾಗಿ ನಡೆದುಕೊಳ್ಳುವ ಅತ್ಯಗತ್ಯ ಬಾಧ್ಯತೆ ಮತ್ತು ಯಾರೇ ವ್ಯಾಜ್ಯಕಾರನ ಜೀವನದಲ್ಲಿ ಮೊಕದ್ದಮೆಯನ್ನು ದೀರ್ಘಕಾಲ ನಡೆಸುವುದನ್ನು ತಪ್ಪಿಸುವ ಒತ್ತಾಯಪೂರ್ವಕ ಅವಶ್ಯಕತೆಯ ನಡುವೆ ನ್ಯಾಯಿಕ ಸಮತೋಲನವನ್ನು ಸಾಧಿಸುವ ಅಗತ್ಯತೆಯಾಗಿ ಒಟ್ಟಾರೆ ಪರಿಗಣನೆಯು ಎಲ್ಲಕ್ಕಿಂತ ಮುಖ್ಯವಾದ ಅಂಶವಾಗುತ್ತದೆ. "

(ಒತ್ತು ನೀಡಲಾಗಿದೆ)

15. ಮೇಲೆ ಉಲ್ಲೇಖಿಸಿದ ಗುರ್ನಾಮ್ ಸಿಂಗ್ ಮೊಕದ್ದಮೆಯಲ್ಲಿನ ತೀರ್ಪಿನ 26 ನೇ ಕಂಡಿಕೆಯಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

"26. ಹಲವು ನಿರ್ಣಯಗಳಲ್ಲಿ ಈ ನ್ಯಾಯಾಲಯವು ವಿಧಿಸಿದ ಕಾನೂನಿನ ಪ್ರಕಾರ, 1976 ನೇ ತಿದ್ದುಪಡಿಯ ನಂತರ ಸಿವಿಲ್ ಪ್ರಕ್ರಿಯಾ ಸಂಹಿತೆಯ 100 ನೇ ಪ್ರಕರಣದ ಅಡಿಯಲ್ಲಿ ಎರಡನೇ ಮೇಲ್ಮನವಿಯನ್ನು ಪುರಸ್ಕರಿಸಲು ಉಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು, ಚ ಎರಡನೇ ಮೇಲ್ಮನವಿಯು ಕಾನೂನಿನ ಪ್ರಮುಖ ಪ್ರಶ್ನೆಯನ್ನು ಒಳಗೊಂಡಿದ್ದಾಗ ಮಾತ್ರವೇ ಪ್ರತಿಬಂಧಿಸಲಾಗಿದೆ. 'ಕಾನೂನಿನ ಪ್ರಮುಖ ಪ್ರಶ್ನೆ'ಯ ಇರುವಿಕೆಯು, ಸಿವಿಲ್ ಪ್ರಕ್ರಿಯಾ ಸಂಹಿತೆಯ 100 ನೇ ಪ್ರಕರಣದ ಮೇರೆಗೆ ಅಧಿಕಾರವ್ಯಾಪ್ತಿಯ ಚಲಾವಣೆಗೆ ಅತ್ಯಾವಶ್ಯಕ (sine quo non) ವಾಗುತ್ತದೆ.ಕೋಂಡಿಬಾ ದಗಡು ಕದಮ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ ಮತ್ತು ನಿರ್ಣಯಿಸಿರುವಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆಯ 100 ನೇ ಪ್ರಕರಣದ ಮೇರೆಗೆ ಎರಡನೇ ಮೇಲ್ಮನವಿಯಲ್ಲಿ, ವಿಚಾರಣಾ ನ್ಯಾಯಾಲಯವು ಕೈಗೊಂಡ ನಿರ್ಣಯಗಳು:

(i) ಅನ್ವಯವಾಗುವ ಕಾನೂನಿನ ಕಡ್ಡಾಯ ಉಪಬಂಧಗಳಿಗೆ ತದ್ವಿರುದ್ಧವಾಗಿ; ಅಥವಾ

(ii) ಸರ್ವೋಚ್ಚ ನ್ಯಾಯಾಲಯವು ಉದ್ಘೋಷಿಸಿದಂತಹ ಕಾನೂನಿಗೆ ತದ್ವಿರುದ್ಧವಾಗಿ; ಅಥವಾ

(iii) ಅಂಗೀಕಾರಾರ್ಹವಲ್ಲದ ಪುರಾವೆಯನ್ನಾಧರಿಸಿ ಅಥವಾ ಪುರಾವೆ ಇಲ್ಲದೆ

ತಪ್ಪಾಗಿದ್ದವು ಎಂಬ ನಿರ್ಣಯಕ್ಕೆ ಉಚ್ಚ ನ್ಯಾಯಾಲಯವು ಬಂದ ಹೊರತು, ಪ್ರಥಮ ಮೇಲ್ಮನವಿ ನ್ಯಾಯಾಲಯದ ಅಭಿ ಪ್ರಾಯಕ್ಕೆ ತನ್ನ ಸ್ವಂತ ಅಭಿ ಪ್ರಾಯವನ್ನು ಪ್ರತಿಯೋಜಿಸಲಾಗುವುದಿಲ್ಲ.(ಒತ್ತು ನೀಡಲಾಗಿದೆ)

16. ಮೇಲ್ಮನವಿದಾರನ ಪರ ಮಾನ್ಯ ನ್ಯಾಯವಾದಿ ಶ್ರೀ ಪ್ರವೀಣ್ ರಾಯಕೋಟೆಯವರು, ವಿವಾದವು ಪಕ್ಷಕಾರರ ಖಾಸಗಿ ಹಕ್ಕುಗಳಿಗೆ ಸಂಬಂಧಿಸಿರುವಾಗ ಅಧಿನಿಯಮದ 61 ರಿಂದ 63 ರವರೆಗಿನ ಪ್ರಕರಣಗಳು ಅನ್ವಯವಾಗುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಇದಲ್ಲದೆ ಅವರು, 61 ನೇ ಪ್ರಕರಣದಲ್ಲಿ ಉಲ್ಲೇಖಿಸಿದ ವಿಷಯಗಳ ಸಂಬಂಧದಲ್ಲಿ ಮಾತ್ರವೇ 63 ನೇ ಪ್ರಕರಣವು ಅನ್ವಯವಾಗುತ್ತದೆ ಮತ್ತು ಮೇಲ್ಮನವಿದಾರನ ಮೊಕದ್ದಮೆಯು 61 ನೇ ಪ್ರಕರಣದ ( 2) ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪ್ರವರ್ಗಗಳಲ್ಲಿ ಬರುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಅವರ ಪ್ರಕಾರ, 61 ನೇ ಮತ್ತು 63 ನೇ ಪ್ರಕರಣಗಳ ಅನ್ವಯತೆಯು, ಮೊಕದ್ದಮೆಯಲ್ಲಿರುವ ಕಾನೂನಿನ ಪ್ರಮುಖ ಪ್ರಶ್ನೆಗೆ ಸಂಬಂಧಿಸಿದುದಾಗಿದೆ.ಅವರ ಇತರ ವಾದಗಳೆಂದರೆ, ಅಧಿನಿಯಮದ ಅಡಿಯಲ್ಲಿ ಪದತ್ತವಾದ ಅಧಿಕಾರಗಳನ್ನು ಚಲಾಯಿಸಿ ತಹಸೀಲ್ದಾರನು ಹೊರಡಿಸಿದ ಆದೇಶಗಳ ಸಂದರ್ಭದಲ್ಲಿ 49 ನೇ, 61 ರಿಂದ 63 ನೇ ಪ್ರಕರಣಗಳು ಅನ್ವಯವಾಗುತ್ತವೆಯೇ ಹೊರತು, ಉತ್ತರಾಧಿಕಾರತ್ವ ಪ್ರಮಾಣಪತ್ರದ ಸಂಬಂಧದಲ್ಲಿ ಅಲ್ಲ ಮತ್ತು ಅದು ಕಾನೂನಿನ ಪ್ರಮುಖ ಪ್ರಶ್ನೆಯಾಗಿದೆ.

17. ಇದಕ್ಕೆ ತದ್ವಿರುದ್ಧವಾಗಿ, ವಾದಿಯ ಪರ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ನ್ಯಾಯವಾದಿಗಳು, ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಸುತ್ತೋಲೆ ಮೂಲಕ ತಹಶೀಲ್ದಾರರಿಗೆ ಪ್ರದತ್ತವಾದ ಅಧಿಕಾರಗಳು ಚಲಾಯಿಸಿ ಪ್ರಶ್ನಿತ ಆದೇಶವನ್ನು ಹೊರಡಿಸಲಾಗಿತ್ತು; ಇದಲ್ಲದೆ, ಮೇಲ್ಮನವಿದಾರನು ಸ್ವತಃ

ಅಂತಹುದೇ ಪ್ರಮಾಣಪತ್ರವನ್ನು ಪಡೆದಿದ್ದಾನಾದ್ದರಿಂದ, ಅಂಥ ಪ್ರಮಾಣಪತ್ರಗಳ ನೀಡಿಕೆಯು, ಅಧಿನಿಯಮದ ಅಡಿಯಲ್ಲಿ ಅಧಿಕಾರ ಚಲಾಯಿಸಲು ಸಂಬಂಧಿಸಿರಲಿಲ್ಲವೆಂಬ ವಾದದಲ್ಲಿ ಯಾವ ಗುಣಾರ್ಹತೆಯು ಇರುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಇದಲ್ಲದೆ ಅವರು, ಮೇಲ್ಮನವಿದಾರನ ಪರ ಮಾನ್ಯ ನ್ಯಾಯವಾದಿಗಳು ಅಧಿನಿಯಮದ 49 ನೇ ಮತ್ತು 61 ರಿಂದ 63 ನೇ ಪ್ರಕರಣಗಳನ್ನು ಅರ್ಥೈಸಿರುವುದು ಸಂಪೂರ್ಣವಾಗಿ ತಪ್ಪಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.

18. ಪ್ರತಿವಾದಿಗಳ ವಾದಗಳ ಹಿನ್ನೆಲೆಯಲ್ಲಿ, ಮೇಲ್ಮನವಿದಾರನ ದಾವೆಯು ಅಧಿನಿಯಮದ 49 ನೇ, 61 ನೇ ಮತ್ತು 63 ನೇ ಪ್ರಕರಣಗಳ ಅಡಿಯಲ್ಲಿ ಬರುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸುವುದು ಸೂಕ್ತವಾದುದಾಗಿದೆ.

ಅಧಿನಿಯಮದ 61 ನೇ ಮತ್ತು 63 ನೇ ಪ್ರಕರಣಗಳ ಸಂಬಂಧದಲ್ಲಿನ ಚರ್ಚೆ:

19. ಅಧಿನಿಯಮದ 63 ನೇ ಪ್ರಕರಣವು ದಾವೆಗೆ ಪ್ರತಿಕೂಲವಾಗಿತ್ತೆಂದು ಎದುರುದಾರರು ವಾದಿಸಿದ್ದಾರೆ.ಮೇಲ್ಮನವಿದಾರನ ಪರ ನ್ಯಾಯವಾದಿಗಳು, ದಾವೆಯು ಆ ಪ್ರಕರಣಗಳ ಅಡಿಯಲ್ಲಿ ಬರುವುದಿಲ್ಲ ಮತ್ತು ಅಧಿನಿಯಮದ 62 ನೇ ಪ್ರಕರಣದಿಂದ ಹೊರತಾಗಿತ್ತು ಎಂದು ವಾದಿಸಿದ್ದಾರೆ.ಅವರ ಮತ್ತೊಂದು ವಾದವೆಂದರೆ, 63 ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದ ಪ್ರತಿಬಂಧವು, 61 ನೇ ಪ್ರಕರಣದ ಅಡಿಯಲ್ಲಿ ಬರುವ ವಿಷಯಗಳಿಗೆ, ಎಂದರೆ ಅಧಿನಿಯಮದ ಅಡಿಯಲ್ಲಿ ಹೊರಡಿಸಲಾಗುವ ಆದೇಶಗಳಿಗೆ ಸಂಬಂಧಿಸಿದ್ದು, ಉತ್ತರಾಧಿಕಾರತ್ವ ಪ್ರಮಾಣಪತ್ರ ನೀಡಿಕೆಯು ಅಧಿನಿಯಮದ ಅಡಿಯಲ್ಲಿ ಬರುವುದಿಲ್ಲ.

20. ಅಧಿನಿಯಮದ 61 ನೇ ಮತ್ತು 63 ನೇ ಪ್ರಕರಣಗಳನ್ನು ಈ ಮುಂದಿನಂತೆ ಓದಲಾಗಿದೆ:

"61. ರೆವಿನ್ಯೂ ನ್ಯಾಯಾಲಯಗಳ ಅನನ್ಯ ಅಧಿಕಾರವ್ಯಾಪ್ತಿ ಮತ್ತು ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಬಂಧ ( 1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಯಾವ ವಿಷಯವನ್ನು ನಿರ್ಧರಿಸಲು, ತೀರ್ಮಾನಿಸಲು ಅಥವಾ ಇತ್ಯರ್ಥ ಮಾಡಲು, ರೆವಿನ್ಯೂ ನ್ಯಾಯಾಲಯಕ್ಕೆ ಅಧಿಕಾರ ನೀಡಲಾಗಿದೆಯೋ ಆ ವಿಷಯವನ್ನು ನಿರ್ಧರಿಸಲು, ತೀರ್ಮಾನಿಸಲು ಅಥವಾ ಇತ್ಯರ್ಥ ಮಾಡಲು ಆ ನ್ಯಾಯಾಲಯಕ್ಕೆ ಅಧಿಕಾರವ್ಯಾಪ್ತಿ ಇರತಕ್ಕದ್ದು ಮತ್ತು ಅಂಥ ಯಾವುದೇ ವಿಷಯದ ಬಗ್ಗೆ ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

(2) ಈ ಮುಂದೆ ನಿರ್ದಿಷ್ಟ ಪಡಿಸಿರುವ ವಿನಾಯಿತಿಗೊಳಪಟ್ಟು, ಯಾವುದೇ ಸಿವಿಲ್ ನ್ಯಾಯಾಲಯವು ಕೆಳಕಂಡ ಯಾವುದೇ ವಿಷಯಗಳ ಬಗ್ಗೆ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ, ಎಂದರೆ:

(ಎ) ಯಾವುದೇ ಹುದ್ದೆಗೆ ಅಥವಾ ಸೇವೆಗೆ ಸಂಬಂಧಪಟ್ಟ ಯಾವುದೇ ಸ್ವತ್ತಿನ ಬಗ್ಗೆ ಸರ್ಕಾರದ ವಿರುದ್ಧ ಕ್ಲೇಮುಗಳು;

(ಬಿ) (1) ಈ ಅಧಿನಿಯಮದ ಮೇರೆಗೆ ನಿರ್ಧರಿಸಲಾದ ಭೂಕಂದಾಯದ ಮೊಬಲಗು ಅಥವಾ ಅದರ ಹೊರೆ ಅಥವಾ;

(ii) ಕಂದಾಯ ನಿರ್ಧರಣೆಯ ಅಥವಾ ವಿಧಿಸುವಿಕೆಯ ರೀತಿ ಅಥವಾ ಯಾವ ತತ್ವದ ಮೇರೆಗೆ ಅಂಥ ಕಂದಾಯ ನಿರ್ಧರಣೆಯನ್ನು ಅಥವಾ ವಿಧಿಸುವಿಕೆಯನ್ನು ಗೊತ್ತುಪಡಿಸಲಾಗಿದೆಯೋ ಆ ತತ್ವ; ಅಥವಾ

(iii) ಮೋಜಣಿಯ ಅಥವಾ ಕಂದಾಯದ ವ್ಯವಸ್ಥೆಯ ಅಧಿಸೂಚನೆಯ ಕಾನೂನುಸಮ್ಮತತೆ ಅಥವಾ ಪರಿಣಾಮ

ಇವುಗಳನ್ನು ಕುರಿತ ಆಕ್ಷೇಪಣೆಗಳು:

(ಸಿ) ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಭೂಕಂದಾಯವೆಂಬಂತೆ ಅಥವಾ ಭೂಕಂದಾಯದ ಬಾಕಿಗಳೆಂಬಂತೆ ವಸೂಲಾಗಬೇಕಾಗಿರುವ ಬೇರೆ ತಗಾದೆಗಳ ವಸೂಲಿಯ ಬಗೆಗಿನ ಯಾವುದೇ ವ್ಯವಹರಣೆಗಳಿಗೆ ಸಂಬಂಧಿಸಿದ ಅಥವಾ ಅವುಗಳಿಂದ ಉದ್ಭವಿಸುವ ಕ್ಲೇಮುಗಳು;

(ಡಿ) ಅಕ್ರಮತೆ, ತಪ್ಪಿನ ಕಾರಣದ ಮೇಲೆ ಅಥವಾ ವಂಚನೆಯನ್ನು ಹೊರತುಪಡಿಸಿ ಇತರ ಯಾವುದೇ ಕಾರಣಕ್ಕಾಗಿ, ಭೂಕಂದಾಯ ಬಾಕಿಗಳಿಗೆ ಸಂಬಂಧಿಸಿದ ಮಾರಾಟವನ್ನು ತಳ್ಳಿಹಾಕಲು ಮಾಡಿದ ಕ್ಲೇಮುಗಳು;

(ಇ) (1) ಕಂದಾಯಕ್ಕೆ ಹೊಣೆಗಾರನೆಂದು ಅಥವಾ ವರಿಷ್ಠ ಹಿಡುವಳಿದಾರನೆಂದು, ಕನಿಷ್ಠ ಹಿಡುವಳಿದಾರನೆಂದು, ಅಧಿಭೋಗದಾರನೆಂದು, ಅಡಮಾನದಾರನೆಂದು, ಭೂಮಾಲೀಕ ನೆಂದು ಅಥವಾ ಗೇಣಿದಾರನೆಂದು ರೆವಿನ್ಯೂ ಮೋಜಣಿ ಅಥವಾ ಕಂದಾಯ ನಿರ್ಧರಣೆಯ ದಾಖಲೆಗಳಲ್ಲಿ ಅಥವಾ ಯಾವುದೇ ಭೂದಾಖಲೆಗಳಲ್ಲಿ ನಮೂದಿಸಿಕೊಳ್ಳಲು; ಅಥವಾ

(ii) ರೆವಿನ್ಯೂ ಮೋಜಣಿ ಅಥವಾ ಕಂದಾಯ ನಿರ್ಧರಣೆಯ ಯಾವುದೇ ದಾಖಲೆಯಲ್ಲಿ ಯಾವುದೇ ನಮೂದನೆಯನ್ನು ಮಾಡಿಕೊಳ್ಳಲು; ಅಥವಾ

(iii) ಅಂಥ ಯಾವುದೇ ನಮೂದನೆಯನ್ನು ಬಿಟ್ಟುಬಿಡುವಂತೆ ಮಾಡಲು ಅಥವಾ ತಿದ್ದುಪಡಿ ಮಾಡಿಸಿಕೊಳ್ಳಲು

ಸರ್ಕಾರದ ವಿರುದ್ಧದ ಕ್ಲೇಮುಗಳು;

(ಎಫ್) ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಯಾವುದೇ ಎಸ್ಟೇಟಿನ ವಿಭಜನೆಯಾದಾಗ ಭೂಮಿಯ ಹಂಚಿಕೆ ಅಥವಾ ಭೂಕಂದಾಯವನ್ನು ಗೊತ್ತುಮಾಡುವಿಕೆ;

(ಜಿ) (i) ಪೂರ್ತಿಯಾಗಿ ಅಥವಾ ಭಾಗಶಃ ಭೂಕಂದಾಯವನ್ನು ಸಂದಾಯ ಮಾಡದೆ ಭೂಮಿಯನ್ನು ಹೊಂದಿರಲು; ಅಥವಾ

(ii) ಭೂಕಂದಾಯದ ಮೇಲೆ ಹೊರಿಸಲಾದ ಅಥವಾ ಅದರಿಂದ ಮಾಡಬೇಕಾಗಿರುವ ಸಂದಾಯಗಳನ್ನು ಸ್ವೀಕರಿಸಲು; ಅಥವಾ

(iii) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳ ಮೇರೆಗೆ ಸಂದಾಯವಾಗಬೇಕಾಗಿರುವ ಯಾವುದೇ ಉಪಕರವನ್ನು ಅಥವಾ ದರವನ್ನು ತಳ್ಳಿ ಹಾಕಲು; ಅಥವಾ

(iv) ಸರ್ಕಾರಕ್ಕೆ ಸೇರಿದ ಬಂಜರು ಭೂಮಿ ಅಥವಾ ಖಾಲಿ ಭೂಮಿಯ ಅಧಿಭೋಗಕ್ಕೆ ಸಂಬಂಧಿಸಿದಂತೆ

-ಸರ್ಕಾರದ ವಿರುದ್ಧದ ಕ್ಲೇಮುಗಳು;

(ಹೆಚ್) ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನಿಗದಿಪಡಿಸಲಾದ ಮೇರೆಗಳ ಬಗ್ಗೆ ಅಥವಾ ಮೇರೆ ಗುರುತುಗಳ ಅಥವಾ ಮೋಜಣಿ ಗುರುತುಗಳ ಬಗ್ಗೆ, ಅಂಥ ಕಾನೂನಿನ ಮೇರೆಗೆ ಸಕ್ಷಮ ಅಧಿಕಾರಿಯು ಮಾಡಿದ ಯಾವುದೇ ಆದೇಶವನ್ನು ತಳ್ಳಿ ಹಾಕುವ ಕುರಿತ ಪ್ಲೇಮುಗಳು:

ಪರಂತು,

(ಎ) ಯಾರೇ ಒಬ್ಬ ವ್ಯಕ್ತಿಯ ಅಥವಾ ವ್ಯಕ್ತಿಗಳ ವರ್ಗದ ಪರವಾಗಿ ಮೊದಲು ಇಲ್ಲದಿದ್ದ ಯಾವುದೇ ವಿನಾಯಿತಿಯನ್ನು ವ್ಯಕ್ತವಾಗಿ ಕಲ್ಪಿಸಿದ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅಥವಾ ಅಂಥ ವಿನಾಯಿತಿಯನ್ನು ಸರ್ಕಾರಿ ದಾಖಲೆಯಲ್ಲಿ ತೋರಿಸಲಾಗಿದೆಯೆಂಬ ಅಥವಾ ನಿರ್ದಿಷ್ಟ ಪಡಿಸಲಾದ ವರ್ಷಗಳ ಅವಧಿವರೆಗೆ ಅದು ಇತ್ತು ಎಂಬ ಕಾರಣದ ಮೇಲೆ ವ್ಯಕ್ತವಾಗಿ ಸ್ಥಿರೀಕರಿಸುವ ಅಂಥ ಯಾವುದೇ ಕಾನೂನಿನ ಮೇರೆಗೆ; ಅಥವಾ

(ಬಿ) ಅಂಥ ವಿನಾಯಿತಿಯನ್ನು ವ್ಯಕ್ತವಾಗಿ ಕಲ್ಪಿಸುವ ಅಥವಾ ಸ್ಥಿರೀಕರಿಸುವ ಯಾವುದೇ ಸರ್ಕಾರಿ ಲಿಖಿತ ಮಂಜೂರಾತಿಯ ಮೇರೆಗೆ

ಕ ೦ ದಾಯದ ಸ ೦ ದಾಯದಿಂದ ಪೂರ್ತಿಯಾಗಿ ಅಥವಾ ಭಾಗಶಃವಾಗಿ ವಿನಾಯಿತಿ ಹೊಂದಿದ ಭೂಮಿಯನ್ನು ತಾನು ಹೊಂದಿದ್ದೇನೆಂದು ಯಾರೇ ವ್ಯಕ್ತಿಯು ಕ್ಲೇಮು ಮಾಡಿದರೆ, ಅಂಥ ಕ್ಲೈಮುಗಳು ಸಿವಿಲ್ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದು.

63. ಸರ್ಕಾರದ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಯನ್ನು ಹೂಡುವುದಕ್ಕೆ ಮುಂಚೆ ವಾದಿಯು ಮೇಲ್ಮನವಿಯ ತನ್ನ ಹಕ್ಕನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳತಕ್ಕದ್ದು.-ರಾಜ್ಯ ಸರ್ಕಾರದ ಅಥವಾ ಕಂದಾಯ (ರೆವಿನ್ಯೂ) ಅಧಿಕಾರಿಯ ಯಾವುದೇ ಕಾರ್ಯದ ಅಥವಾ ಕಾರ್ಯಲೋಪದ ಕಾರಣದ ಮೇಲೆ, ರಾಜ್ಯ ಸರ್ಕಾರದ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಯನ್ನು ವಾದಿಯು ಹೂಡುವುದಕ್ಕೆ ಮೊದಲು, ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಅವಕಾಶವಿರುವಂಥ ಎಲ್ಲ ಮೇಲ್ಮನವಿಗಳನ್ನು, ಅಂಥ ದಾವೆ ಅಥವಾ ವ್ಯವಹರಣೆಯನ್ನು ಹೂಡಲು ಅವಕಾಶ ಮಾಡಿಕೊಡಲಾದ ಕಾಲಪರಿಮಿತಿಯೊಳಗಾಗಿ, ಹೂಡಲು ಸಾಧ್ಯವಿದ್ದಂತೆ ವಾದಿಯು ಹೂಡಿದ್ದಾನೆಂದು ಅವನು ಸಿದ್ಧಪಡಿಸಿದ ಹೊರತು, ಯಾವ ಸಿವಿಲ್ ನ್ಯಾಯಾಲಯವೂ ಅಂಥ ದಾವೆಯನ್ನು ಅಥವಾ ವ್ಯವಹರಣೆಯನ್ನು ವಿಚಾರಣೆಗೆ ತೆಗೆದುಕೊಳ್ಳತಕ್ಕದ್ದಲ್ಲ.

20. ಮೇಲಿನ ಉಪಬಂಧಗಳ ಅವಲೋಕನದಿಂದ, ಅಧಿನಿಯಮದ ಅಡಿಯಲ್ಲಿ ಪ್ರದತ್ತವಾದ ಅಧಿಕಾರದ ಬಲದಿಂದ 61 ( 1) ನೇ ಪ್ರಕರಣವು ರೆವಿನ್ಯೂ ನ್ಯಾಯಾಲಯಗಳ ಅನನ್ಯ ಅಧಿಕಾರ ವ್ಯಾಪ್ತಿಗೆ ಅವಕಾಶ ಕಲ್ಪಿಸುತ್ತದೆ ಮತ್ತು ಅಂಥ ವಿಷಯಗಳಲ್ಲಿ ಸಿವಿಲ್ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಪ್ರತಿಬಂಧಿಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ.61 ( 2) ನೇ ಪ್ರಕರಣವು ನಿರ್ದಿಷ್ಟವಾಗಿ ಕಂದಾಯ ನಿರ್ಧರಣೆಯ ವಸೂಲಾತಿ, ಇತ್ಯಾದಿಗೆ ಸಂಬಂಧಿಸಿದಂತೆ ( ಎ) ಯಿಂದ (ಹೆಚ್) ವರೆಗಿನ ಖಂಡಗಳಲ್ಲಿ

ಉಲ್ಲೇಖಿಸಿದ ವಿಷಯಗಳಿಗೆ ಸಂಬಂಧಪಟ್ಟಂತೆ ಸಿವಿಲ್ ನ್ಯಾಯಾಲಯದ ಅಧಿಕಾರವಾಪ್ತಿಯನ್ನು ಪ್ರತಿಬಂಧಿಸುತ್ತದೆ.ಅಧಿವಿಚಾರಣಾ ನ್ಯಾಯಾಲಯ ಮತ್ತು ಪ್ರಥಮ ಮೇಲ್ಮನವಿ ನ್ಯಾಯಾಲಯಗಳು, 61 ನೇ ಪ್ರಕರಣವು ದಾವೆಗೆ ಪ್ರತಿಕೂಲವಾಗಿರುತ್ತದೆ ಎಂದು ಹೇಳಿರುವುದಿಲ್ಲವಾದ್ದರಿಂದ, ಈ ಮೇಲ್ಮನವಿಯಲ್ಲಿ ಅದು ಕಾನೂನಿನ ಪ್ರಮುಖ ಪ್ರಶ್ನೆಯಾಗುವುದಿಲ್ಲ.

21. 63 ನೇ ಪ್ರಕರಣದ ಅನ್ವಯತೆಗೆ ಅಥವಾ 61 ನೇ ಪ್ರಕರಣದೊಂದಿಗೆ ಅದರ ಆರೋಪಿತ ಆಂತರಿಕ ಬದಲಾವಣೆಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ಅಂಥ ಪರಿಹಾರವು ಲಭ್ಯವಿದ್ದ ಹೊರತು, ಕಂದಾಯ ಅಧಿಕಾರಿಯ ಆದೇಶದ ವಿರುದ್ಧ ಮೇಲ್ಮನವಿಯನ್ನು ಉಪಬಂಧಿಸಿರುವ ಕಡೆಯಲ್ಲೆಲ್ಲಾ, ಸಿವಿಲ್ ನ್ಯಾಯಾಲಯವು ದಾವೆಯನ್ನು ಪುರಸ್ಕರಿಸತಕ್ಕದ್ದಲ್ಲ ಎಂಬುದನ್ನು 63 ನೇ ಪ್ರಕರಣವು ಸ್ಪಷ್ಟಪಡಿಸುತ್ತದೆ.ಅಂಥ ಪ್ರತಿಬಂಧವನ್ನು ವಿಧಿಸುವಾಗ, 61 ನೇ ಪ್ರಕರಣದ ಸಂಬಂಧದಲ್ಲಿ ಸರ್ಕಾರದ ಅಥವಾ ಕಂದಾಯ ಅಧಿಕಾರಿಗಳ ಅಂಥ ಆದೇಶಗಳನ್ನು 63 ನೇ ಪ್ರಕರಣವು ಪರಿಮಿತಗೊಳಿಸುವುದಿಲ್ಲ.61 ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಆದೇಶಗಳಿಗೆ 63 ನೇ ಪ್ರಕರಣವು ಸಂಬಂಧಿಸುತ್ತದೆಂದು ಅದರಲ್ಲಿ ಹೇಳಿರುವುದಿಲ್ಲ.ಆದುದರಿಂದ, 63 ನೇ ಪ್ರಕರಣದ ಅಡಿಯಲ್ಲಿ ಪರ್ಯಾಲೋಚಿಸಿದ ಆದೇಶಗಳು, 61 ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಆದೇಶಗಳು ಮಾತ್ರ ಎಂಬುದನ್ನು ಒಪ್ಪಲಾಗುವುದಿಲ್ಲ ಎಂಬುದು ವಾದವಾಗಿದೆ.

22. ಮುಂದಿನ ಪ್ರಶ್ನೆ, ನಿಶಾನೆ-ಪಿ .1 ಮತ್ತು ಪಿ .2 ರಲ್ಲಿನ ಆದೇಶಗಳು ಅಧಿನಿಯಮದ 49 ನೇ ಪ್ರಕರಣದ ಅಡಿಯಲ್ಲಿ ಮೇಲ್ಮನವಿ ಸಲ್ಲಿಸಬಹುದಾಗಿದೆಯೇ ಎಂದು 63 ನೇ ಪ್ರಕರಣವನ್ನು ಅನ್ವಯಿಸುವುದಾಗಿದೆ.49 ನೇ ಪ್ರಕರಣವನ್ನು ಈ ಕೆಳಗಿನಂತೆ ಓದಲಾಗಿದೆ:

49. ಮೂಲ ಆದೇಶಗಳ ಮೇಲೆ ಮೇಲ್ಮನವಿಗಳು.-ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿರುವುದನ್ನುಳದು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿರುವ ನಿಯಮಗಳ ಮೇರೆಗೆ ಹೊರಡಿಸಿದ ಪ್ರತಿಯೊಂದು ಮೂಲ ಆದೇಶದ ಮೇಲೆ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ (ಕೇಂದ್ರ ಅಧಿನಿಯಮ 1908 ರ 5) 54 ನೇ ಪ್ರಕರಣದ ಮೂಲಕ ಪ್ರದವಾದ ಅಧಿಕಾರಗಳನ್ನು ಚಲಾಯಿಸಿ ಹೊರಡಿಸಿದ ಪ್ರತಿಯೊಂದು ಆದೇಶ ದ ಮೌಲ್ ಕೆಳ ಕ ಂ ಡ ಂ ತೆ ಮೇಲ್ಮನವಿಗೆ ಅವಕಾಶವಿರತಕ್ಕದ್ದು,

( ಎ) ಅಸಿಸ್ಟೆಂಟ್ ಕಮಿಷನರ್ನ ಅಧೀನದಲ್ಲಿರುವ ಕಂದಾಯ (ರೆವಿನ್ಯೂ) ಅಧಿಕಾರಿಯು, ಅವನಲ್ಲಿ, ಅಸಿಸ್ಟೆಂಟ್ ಕಮಿಷನರ್ ಅಥವಾ ಡೆಪ್ಯೂಟಿ ಕಮಿಷನರ್ ಅಧಿಕಾರಗಳು ನಿಹಿತವಾಗಿರಲಿ ಅಥವಾ ಇಲ್ಲದಿರಲಿ, ಆದೇಶವನ್ನು ಮಾಡಿದ್ದರೆ ಅಸಿಸ್ಟೆಂಟ್ ಕಮೀಷನರಿಗೆ; "

23. ಹಾಗಿದ್ದರೆ, ಎರಡನೇ ಎದುರುದಾರರು ಹೊರಡಿಸಿದ ಆದೇಶವು, ಅಧಿನಿಯಮದ 49 ನೇ ಪ್ರಕರಣದ ಅಡಿಯಲ್ಲಿ ಪರ್ಯಾಲೋಚಿಸಿದಂತೆ ಮೂಲ ಆದೇಶವೇ ಎಂಬುದು ಪ್ರಶ್ನೆಯಾಗಿದೆ.ಅಧಿನಿಯಮದ 11 ನೇ ಪ್ರಕರಣವು ತಹಶೀಲ್ದಾರನ ಕರ್ತವ್ಯಗಳನ್ನು ಮತ್ತು ಅಧಿಕಾರಗಳನ್ನು ಕುರಿತು ವ್ಯವಹರಿಸುತ್ತಿದ್ದು, ಅದನ್ನು ಈ ಮುಂದಿನಂತೆ ಓದಲಾಗಿದೆ:

"11. ತಹಶೀಲ್ದಾರರು.- ( 1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಪ್ರತಿಯೊಂದು ತಾಲೂಕಿಗೆ ಒಬ್ಬ ತಹಶೀಲ್ದಾರನನ್ನು ನೇಮಕ ಮಾಡತಕ್ಕದ್ದು ಮತ್ತು ಆತನು ತಾಲ್ಲೂಕಿನ ಭೂ ಭೂ ಕ ಂ ದಾಯದ ಆಡಳಿತವನ್ನು ನಿರ್ವಹಿಸುವ ಮುಖ್ಯ ಅಧಿಕಾರಿಯಾಗಿರತಕ್ಕದ್ದು.ಆ ತಾಲೂಕಿನ ಆಡಳಿತವನ್ನು ಹೊಂದಿರುವ

ಅಸಿಸ್ಟೆಂಟ್ ಕಮಿಷನರನಿಗೆ ಆತನು ಅಧೀನವಾಗಿರತಕ್ಕದ್ದು ಮತ್ತು ಅಂಥ ಅಸಿಸ್ಟೆಂಟ್ ಕಮಿಷನರನು ಇಲ್ಲದಿದ್ದಲ್ಲಿ ಆ ಜಿಲ್ಲೆಯ ಡೆಪ್ಯುಟಿ ಕಮಿಷನರ್ನ ಅಧೀನನಾಗಿರತಕ್ಕದ್ದು.

( 2) ತಹಶೀಲ್ದಾರನ ಕರ್ತವ್ಯಗಳು ಮತ್ತು ಅಧಿಕಾರಗಳು ಈ ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಮೂಲಕ ಸ್ಪಷ್ಟವಾಗಿ ಅವನಿಗೆ ವಿಧಿಸಬಹುದಾದಂಥವುಗಳು ಅಥವಾ ಪ್ರದತ್ತವಾಗ ಬಹುದಾದಂಥವುಗಳು ಆಗಿರತಕ್ಕದ್ದು, ಅಥವಾ ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳ ಅಡಿಯಲ್ಲಿ ಡೆಪ್ಯುಟಿ ಕಮಿಷನರನು ಅವನಿಗೆ ವಿಧಿಸಬಹುದಾದಂಥ ಅಥವಾ ಪ್ರತ್ಯಾಯೋಜಿಸಬಹುದಾದಂಥ ಅವಧಿಗಾಗಿ ಆಗಿರತಕ್ಕದ್ದು. "

24. ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ 195 ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:

"195. ಅಧಿಕಾರಗಳ ಪ್ರತ್ಯಾಯೋಜನೆ.- ( 1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ತನಗೆ ಅಧೀನನಾಗಿರುವ ಯಾರೇ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರಕ್ಕೆ ಅಥವಾ ಅದಕ್ಕೆ ಅಧೀನವಾಗಿರುವ ಯಾರೇ ಅಧಿ ಕಾರಿಗೆ ಪ್ರದತ್ತವಾಗಿರುವ ಅಧಿ ಕಾರಗಳನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳು ಯಾವುವಾದರೂ ಇದ್ದರೆ ಅವುಗಳಿಗೊಳಪಟ್ಟು ಪ್ರತ್ಯಾಯೋಜಿಸಬಹುದು.

(2) ಉಪಪ್ರಕರಣ ( 1) ರಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು 3, 4, 6, 7, 8, 9, 10, 18, 20, 21, 40, 43, 48, 114, 115, 121 ಅಥವಾ 125 ನೇ ಪ್ರಕರಣಗಳ ಮೇರೆಗಿನ ತನ್ನ ಯಾವುದೇ ಅಧಿಕಾರಗಳನ್ನು ಅಥವಾ 19 ನೇ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸುವ ಅಧಿಕಾರವನ್ನು ಅಥವಾ 210 ನೇ ಪ್ರಕರಣದ ಮೇರೆಗೆ ತೊಂದರೆಗಳನ್ನು ನಿವಾರಿಸುವ ಅಧಿಕಾರವನ್ನು ಪ್ರತ್ಯಾಯೋಜಿಸತಕ್ಕದ್ದಲ್ಲ. "

25. ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಕರ್ನಾಟಕ ಸರ್ಕಾರ ಇವರು ಹೊರಡಿಸಿದದಿನಾಂಕ: 12.03.2008 ರ ಸರ್ಕಾರಿ ಸುತ್ತೋಲೆಸಂಖ್ಯೆ: ಆರ್ಡಿ 46 ಎಎಸ್ಸಿ 2005 ಇದು, ಉತ್ತರಾಧಿಕಾರತ್ವ ಪ್ರಮಾಣಪತ್ರವನ್ನು ಹೊರಡಿಸಲು ತಹಶೀಲ್ದಾರನನ್ನು ಅಧಿಕೃತಗೊಳಿಸುತ್ತದೆ.ಆದುದರಿಂದ, ಅಧಿನಿಯಮದ 195 ನೇ ಪ್ರಕರಣದೊಂದಿಗೆ ಓದಲಾಗುವ 11 ( 2) ನೇ ಪ್ರಕರಣದ ಬಲದಿಂದ ಹೊರಡಿಸಿದ ಮೇಲೆ ಹೇಳಿದ ಸುತ್ತೋಲೆಯ ಅಡಿಯಲ್ಲಿ ರಾಜ್ಯ ಸರ್ಕಾರದ ವಿಶೇಷ ಆದೇಶವು ತಹಶೀಲ್ದಾರನಿಗೆ ಪ್ರತ್ಯಾಯೋಜಿಸಿದ ಅಧಿಕಾರಗಳನ್ನು ಚಲಾಯಿಸಿ, 2 ನೇ ಎದುರುದಾರರು ನಿಶಾನೆ-ಪಿ .1 ರಿಂದ ಪಿ.ಸಿಗಳನ್ನು (ಆದೇಶಗಳನ್ನು ಹೊರಡಿಸಿದ್ದಾರೆಂದು ಭಾವಿಸಲಾಗಿದೆ. ಮೇಲ್ಮನವಿದಾರನು ಸದರಿ ಸುತ್ತೋಲೆಯನ್ನು ಯಾವುದೇ ವ್ಯವಹರಣೆಗಳಲ್ಲಿ ಪ್ರಶ್ನಿಸಿರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಅವೇ ಅಧಿಕಾರಗಳನ್ನು ಅನ್ವಯಿಸಿ ಮೇಲ್ಮನವಿದಾರನು ತನ್ನ ಪರವಾಗಿ ನಿಶಾನೆ-ಪಿ .3 ಪ್ರಮಾಣಪತ್ರವನ್ನು ಪಡೆದಿದ್ದಾನೆ.

26. ಈ ದಾವೆಯಲ್ಲಿ, ಆತನು ಸ್ವತಃ ನಿಶಾನೆ-ಪಿ .3 ಕಾನೂನುಬದ್ಧವಾದುದೆಂಬ ಮಟ್ಟಿಗೆ ಘೋಷಣೆಯನ್ನು ಕೋರಿದ್ದಾನೆ.ಆದುದರಿಂದ, ಆ ಸಂಬಂಧದಲ್ಲಿ ವಾದಗಳಲ್ಲಿ ಯಾವುದೇ ಆಧಾರವಿಲ್ಲದೆ, ಈ ಎರಡನೇ ಮೇಲ್ಮನವಿಯಲ್ಲಿ ಮೊದಲ ಬಾರಿ, ಅಧಿನಿಯಮದ 11 ನೇ ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು ಚಲಾಯಿಸಿ, 2 ನೇ ಎದುರುದಾರರು ನಿಶಾನೆ-ಪಿ 1 ಮತ್ತು ಪಿ .2 ನ್ನು ಹೊರಡಿಸಿರಲಿಲ್ಲವೆಂದು ವಾದಿಸಲು

ಮೇಲ್ಮನವಿದಾರನು ಅವಕಾಶ ಹೊಂದಿರುವುದಿಲ್ಲ.ಮೇಲ್ಮನವಿದಾರನು ಒಂದೇ ವಿಷಯದಲ್ಲಿ ಒಂದೇ ಸಲಕ್ಕೆ ಪರವಾಗಿ ಮತ್ತು ವಿರುದ್ಧವಾಗಿ ಇರಲು ಸಾಧ್ಯವಿಲ್ಲ.

27. ಇಂತಹುದೇ ವಿಷಯದಲ್ಲಿ ಮೇಲೆ ಉಲ್ಲೇಖಿಸಿದ ಬಸವಣ್ಣೆ ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು, ಅಧಿನಿಯಮದ 63 ನೇ ಪ್ರಕರಣವನ್ನು ಪರಿಗಣಿಸಿ, ಸಿವಿಲ್ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಪ್ರತಿಬಂಧಿಸಲಾಗಿದೆ ಎಂದು ನಿರ್ಣಯಿಸಿತು.ಆದುದರಿಂದ, ನಿಶಾನೆ-ಪಿ .1 ರಿಂದ ಪಿ .3 ರವರೆಗಿನ ಆದೇಶಗಳಿಗೆ 61 ನೇ ಮತ್ತು 63 ನೇ ಪ್ರಕರಣಗಳ ಅನ್ವಯತೆಯು ಕಾನೂನಿನ ಪ್ರಮುಖ ಪ್ರಶ್ನೆಯಾಗಿದೆ ಎಂಬ ವಾದದಲ್ಲಿ ಯಾವುದೇ ಗುಣಾರ್ಹತೆ ಇರುವುದಿಲ್ಲ.

ಅಧಿನಿಯಮದ 62 ನೇ ಪ್ರಕರಣದ ಸಂಬಂಧದಲ್ಲಿನ ಚರ್ಚೆ

28. ಮೇಲ್ಮನವಿದಾರನ ಪರ ಮಾನ್ಯ ನ್ಯಾಯವಾದಿಗಳು, 62 ನೇ ಪ್ರಕರಣದ ಅಡಿಯಲ್ಲಿ ಮೇಲ್ಮನವಿದಾರನ ದಾವೆಯು ಉಳಿಯುತ್ತದೆ ಎಂದು ವಾದಿಸಿದ್ದಾರೆ.ಅಧಿನಿಯಮದ 62 ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:

"62. ಕೆಲವು ದಾವೆಗಳನ್ನು ಉಳಿಸುವುದು.ಈ ಕೆಳಗಿನ ದಾವೆಗಳ ಪೈಕಿ ಯಾವುದೇ ದಾವೆಯನ್ನು ವಿಚಾರಣೆಗೆ ತೆಗೆದುಕೊಳ್ಳಲು 61 ನೇ ಪ್ರಕರಣದಲ್ಲಿರುವುದು ಯಾವುದೂ ಸಿವಿಲ್ ನ್ಯಾಯಾಲಯವನ್ನು ಪ್ರತಿಬಂಧಿಸುವುದೆಂದು ಭಾವಿಸತಕ್ಕದ್ದಲ್ಲ; ಎಂದರೆ:

(ಎ) ಭೂಕಂದಾಯವೆಂದು ಕ್ಲೇಮು ಮಾಡಲಾದ ಅಥವಾ ಪ್ರತಿಭಟಿಸಿ ಸಂದಾಯ ಮಾಡಿದ ಅಥವಾ ವಸೂಲು ಮಾಡಲಾದ ಮೊಬಲಗು, ರಾಜ್ಯ ಸರ್ಕಾರವು ಆ ಬಗ್ಗೆ ಅಧಿಕೃತಗೊಳಿಸಲಾದ ಮೊಬಲಗಿಗಿಂತ ಹೆಚ್ಚಾಗಿದೆಯೆಂಬ ಅಥವಾ ಅಂಥ ಮೊಬಲಗನ್ನು ಅಂಥ ಕ್ಲೇಮಿಗೆ, ಸಂದಾಯಕ್ಕೆ ಅಥವಾ ವಸೂಲಿಗೆ ಮುಂಚೆಯೇ ಪೂರ್ತಿ ಅಥವಾ ಭಾಗಶಃ ಸಂದಾಯ ಮಾಡಲಾಗಿದೆಯೆಂಬ ಅಥವಾ ವಾದಿಯು ಅಥವಾ ಅವನು ಪ್ರತಿನಿಧಿಸುವ ವ್ಯಕ್ತಿಯು ಅಂಥ ಮೊಬಲಗಿಗೆ ಹೊಣೆಗಾರನಾದ ವ್ಯಕ್ತಿಯಲ್ಲ ಎಂಬ ಕಾರಣದ ಮೇಲೆ ಅಂಥ ಮೊಬಲಗಿನ ಬಗ್ಗೆ ಪ್ರತಿಪಾದಿಸಿ ರಾಜ್ಯ ಸರ್ಕಾರದ ವಿರುದ್ಧ ಹೂಡಿದ ದಾವೆಗಳು;

(ಬಿ) ಯಾವುದೇ ಭೂದಾಖಲೆಯಲ್ಲಿರುವ ಯಾವುದೇ ನಮೂದನೆಯಿಂದಾಗಿ ಯಾವುದೇ ಖಾಸಗಿ ಹಕ್ಕಿನ ಮೇಲೆ ಪರಿಣಾಮವಾಗಬಹುದಾಗಿದ್ದರೂ, ಅಂಥ ಖಾಸಗಿ ಹಕ್ಕನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಖಾಸಗಿ ವ್ಯಕ್ತಿಗಳ ನಡುವಣ ದಾವೆಗಳು;

(ಸಿ) ಪೂರ್ತಿ ಸರ್ವೇ ನಂಬರು ಅಥವಾ ಸರ್ವೇ ನಂಬರಿನ ಫೋಡು ಅಥವಾ ಅದರ ಭಾಗ ಆಗಿರುವ ಯಾವುದೇ ಭೂಮಿಯ ಸ್ವಾಧೀನಕ್ಕಾಗಿ ಖಾಸಗಿ ವ್ಯಕ್ತಿಗಳ ನಡುವಣ ದಾವೆಗಳು. "

29. ದಾವೆಯಲ್ಲಿ ಮೇಲ್ಮನವಿದಾರನು ಕೋರಿದ ಘೋಷಣೆಯು, ಭೂ ಕಂದಾಯವಾಗಿ ವಸೂಲು ಮಾಡಿದ ಹೆಚ್ಚುವರಿ ಮೊತ್ತದ ವಸೂಲಾತಿಗೆ ಸಂಬಂಧಿಸಿದ್ದಲ್ಲ ಅಥವಾ ಯಾವುದೇ ಖಾಸಗಿ ಹಕ್ಕನ್ನು ಸಾಬೀತುಪಡಿಸಲು ಅಲ್ಲ ಅಥವಾ ಅಧಿನಿಯಮದ 62 (  ಎ) ಯಿಂದ (ಸಿ) ವರೆಗಿನ ಪ್ರಕರಣಗಳ ಅಡಿಯಲ್ಲಿ ಪರ್ಯಾಲೋಚಿಸಿದಂತೆ ಭೂ ಸ್ವಾಧೀನಕ್ಕಲ್ಲ.ಇದಕ್ಕೆ ತದ್ವಿರುದ್ಧವಾಗಿ ಆತನು, ಮೇಲೆ ಉಲ್ಲೇಖಿಸಿದ ಸುತ್ತೋಲೆ ಮೇರೆಗೆ ಸರ್ಕಾರದ ವಿಶೇಷ ಆದೇಶವು ತಹಶೀಲ್ದಾರರಿಗೆ ಪ್ರದತ್ತಗೊಳಿಸಿದ ಅಧಿಕಾರಗಳನ್ನು ಚಲಾಯಿಸಿ ಅವರು ಹೊರಡಿಸಿದ

ನಿಶಾನೆ-ಪಿ .1 ರಿಂದ ಪಿ .3 ರ ಮೇರೆಗಿನ ಆದೇಶಗಳ ಸಿಂಧುತ್ವಕ್ಕೆ ಅಥವಾ ಕಾನೂನುಸಮ್ಮತತೆಗೆ ಸಂಬಂಧಿಸಿದಂತೆ ಘೋಷಣೆ ಕೋರಿದ್ದಾನೆ.ಈಗಾಗಲೇ ಅಭಿಪ್ರಾಯಪಟ್ಟಿರುವಂತೆ, ಅಧಿನಿಯಮದ 49 ನೇ ಪ್ರಕರಣದ ಅಡಿಯಲ್ಲಿ ಮೇಲ್ಮನವಿ ಸಲ್ಲಿಸಬಹುದಾಗಿದೆ.ಆದುದರಿಂದ, ಮೇಲ್ಮನವಿದಾರನ ದಾವೆಯನ್ನು ಅಧಿನಿಯಮದ 62 ನೇ ಪ್ರಕರಣದ ಅಡಿಯಲ್ಲಿ ಉಳಿಯುತ್ತದೆ ಎಂಬ ವಾದದಲ್ಲಿ ಗುಣಾರ್ಹತೆಯಿರುವುದಿಲ್ಲ.

30. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, ಪ್ರಥಮ ಮೇಲ್ಮನವಿ ನ್ಯಾಯಾಲಯದ ಮತ್ತು ಅಧಿವಿಚಾರಣಾ ನ್ಯಾಯಾಲಯದ ತೀರ್ಪುಗಳು ಮತ್ತು ಡಿಗ್ರಿಗಳು, ಅನ್ವಯವಾಗಬಹುದಾದ ಕಾನೂನಿನ ಕಡ್ಡಾಯ ಉಪಬಂಧಗಳಿಗೆ ಅಥವಾ ಸರ್ವೋಚ್ಚ ನ್ಯಾಯಾಲಯವು ಉದ್ಘೋಷಿಸಿದ ನಿಯಮಕ್ಕೆ ವಿರುದ್ಧವಾಗಿವೆ ಅಥವಾ ಅಂಗೀಕಾರಾರ್ಹವಲ್ಲದ ಸಾಕ್ಷ್ಯವನ್ನಾಧರಿಸಿವೆ ಅಥವಾ ಸಾಕ್ಷ್ಯವೇ ಇರುವುದಿಲ್ಲ.ಮೇಲ್ಮನವಿಂತು ಕಾನೂನಿನ ಯಾವುದೇ ಪ್ರಮುಖ ಪ್ರಶ್ನೆಯನ್ನು ಒಳಗೊಂಡಿಲ್ಲವಾದ್ದರಿಂದ, ವೆಚ್ಚ ಸಹಿತವಾಗಿ ಅದನ್ನು ವಜಾಗೊಳಿಸಲಾಗಿದೆ.